| |
|---|
| **Deposition Sheets (RP.No.57) Form No.4** |

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 397/2017**

ಪಿ.ಡಬ್ಲ್ಯು : 12 ಸಿ.ಡಬ್ಲ್ಯು : 14

ಸಾಕ್ಷಿದಾರನ ಹೆಸರು : ಅಬ್ದುಲ್ ಅಜೀಜ್
ತಂದೆಯ ಹೆಸರು : ಇಸ್ಮಾಯಿಲ್
ಪ್ರಾಯ : 47 ವರ್ಷ
ಉದ್ಯೋಗ : ವ್ಯಾಪಾರ
ವಾಸ : ಮುಂಡ್ಕೂರು

ದಿನಾಂಕ 10.04.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಸಾಕ್ಷಿಯು ವಿಸಿ ಮುಖಾಂತರ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನಿಪಿ-9 ಆರೋಪಿಯು ಕಳವು ನಡೆಸಿರುವ ಘಟನಾ ಸ್ಥಳವನ್ನು ತೋರಿಸಿಕೊಡುವ ಸಮಯ ತಯಾರಿಸಿದ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಸುಮಾರು 7 ವರ್ಷಗಳ ಹಿಂದೆ ಅಜೆಕಾರಿನಲ್ಲಿ ಮಾಡಿರುತ್ತೇನೆ. ನಿಪಿ-9 ಕ್ಕೆ ಸಹಿ ಮಾಡುವಾಗ ಆರೋಪಿ ಮತ್ತು ಚಾಸಾ-13 ರವರು ಹಾಜರಿದ್ದರು. ನನ್ನನ್ನು ಆರೋಪಿ ತೋರಿಸಿಕೊಟ್ಟ ಸ್ಥಳಗಳಾದ ಮುಂಡ್ಕೂರು, ಕುಂಟಾಡಿ, ಬೈಲೂರು, ದುರ್ಗಾ ಗ್ರಾಮ, ಮಿಯಾರು, ಸದಾನಂದ ರೋಡ್, ಅಜೆಕಾರು ಮುಂತಾದ ಕಡೆಗೆಗಳಿಗೆ ಪೊಲೀಸರು ಕರೆದುಕೊಂಡು ಹೋಗಿರುತ್ತಾರೆ. ಆರೋಪಿ ತೋರಿಸಿಕೊಟ್ಟ ಸ್ಥಳಗಳಿಗೆ ಪೊಲೀಸರು ನನ್ನನ್ನು ಹಾಗೂ ಚಾಸಾ-13 ರವರು ಕರೆದುಕೊಂಡು ಹೋಗಿರುತ್ತಾರೆ.

**ಪಾಟೀ ಸವಾಲು** : ಆರೋಪಿ ಪರ : ಶ್ರೀ ಕೆ ಬಿ ಎಸ್ ವಕೀಲರಿಂದ :

ನಾನು ಬಟ್ಟೆ ವ್ಯಾಪಾರಿಯಾಗಿದ್ದು ಊರಿಂದ ಊರಿಗೆ ಹೋಗುತ್ತೇನೆ. ದಿಃ11.12.2016 ರಂದು ಬೆಳಿಗ್ಗೆ 9.30 ಗಂಟೆಗೆ ನನ್ನನ್ನು ಹಾಗೂ ಚಾಸಾ-13 ರವರನ್ನು ಪೊಲೀಸ್ ಪೇದೆ ಠಾಣೆಗೆ ಕರೆದಿರುತ್ತಾರೆ. ಆರೋಪಿಯ ಪರಿಚಯ ನನಗೆ ಮೊದಲು ಇರಲಿಲ್ಲ. ದಿಃ11.12.2016 ರಂದು ನಾನು ಪೊಲೀಸ್ ಠಾಣೆಯಲ್ಲಿ ಆರೋಪಿಯನ್ನು ನೋಡಿರುತ್ತೇನೆ. ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರು ಇದ್ದರು ಎನ್ನುವ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಆ ಸಮಯದಲ್ಲಿ ಸುರೇಶ್ ಜೋಗಿ ಠಾಣೆಯಲ್ಲಿ ಇರಲಿಲ್ಲ. ಠಾಣೆಯಲ್ಲಿ ಪೊಲೀಸರು ನನ್ನನ್ನು ಪ್ರಶ್ನಿಸಿರುವುದಿಲ್ಲ. ಠಾಣೆಯಲ್ಲಿ ಎಷ್ಟು ಸಮಯ ಇದ್ದೆ ಎಂದು ನನಗೆ ನೆನಪಿಲ್ಲ. ಪೊಲೀಸರು ಆರೋಪಿಯ ವಿರುದ್ದ ಪ್ರಕರಣ ದಾಖಲಿಸಬೇಕೆಂದು ದಾಖಲೆಗಳಿಗೆ ಠಾಣೆಯಲ್ಲಿ ಸಹಿ ತೆಗೆದುಕೊಂಡಿರುತ್ತಾರೆ ಸಾಕ್ಷಿಯು ಪೊಲೀಸರು ಮಹಜರು ನಡೆಸಿ ಕೊನೆಯ ಬಾರಿ ಅಜೆಕಾರಿನ ಒಂದು ಮನೆಯಲ್ಲಿ ಸಹಿ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರು ಸಮಯದಲ್ಲಿ ಎಷ್ಟು ಜನ ಪೊಲೀಸರು ಇದ್ದರು ಎಂದು ನನಗೆ ನೆನಪಿಲ್ಲ. ಮಹಜರು ನಡೆಸಲು ಠಾಣೆಯಿಂದ ಎಷ್ಟು ಗಂಟೆಗೆ ಹೊರಟೆವು ಎಂಬ ಬಗ್ಗೆ ನೆನಪಿಲ್ಲ. ಪ್ರಥಮ ಬಾರಿಗೆ ಸುರೇಶ್ ಜೋಗಿ ಎನ್ನುವವರ ಮನೆಗೆ ಹೋಗಿರುತ್ತೇವೆ. ನಾನು ಸುರೇಶ್ ಜೋಗಿಯವರ ಮನೆಯಲ್ಲಿ ಪೊಲೀಸರ ಜೊತೆ ಪರಿಶೀಲನೆ ಮಾಡಿರುವುದಿಲ್ಲ. ಸುರೇಶ್ ಜೋಗಿಯವರ ಮನೆಯಲ್ಲಿ ಪೊಲೀಸರು ಎಷ್ಟು ಸಮಯ ಇದ್ದರು ಎನ್ನುವ ಬಗ್ಗೆ ನೆನಪಿಲ್ಲ. ಯಾವ ರೀತಿಯಲ್ಲಿ ದಾಖಲೆಗಳನ್ನು ತಯಾರಿಸಿದ್ದಾರೆ ಎಂದು ಗೊತ್ತಿಲ್ಲ. ಸುರೇಶ್ ಜೋಗಿಯವರ ಮನೆಯಿಂದ ಮುಂಡ್ಕೂರಿನ ರತಿ ಶೆಟ್ಟಿಯವರ ಮನೆಗೆ ಹೋಗಿರುತ್ತೇವೆ. ನನ್ನನ್ನು ಹೊರತುಪಡಿಸಿ ನೆರೆಕರೆಯವರು ಸಾಕ್ಷಿಯಾಗಿ ಕರೆಸಿದ ಬಗ್ಗೆ ಗೊತ್ತಿಲ್ಲ. ಸ್ಥಳ ತನಿಖೆ ಮಾಡಿದ 9 ಮನೆಗಳ ಮನೆ ನಂಬ್ರ ಹಾಗೂ ಮಾಲೀಕರ ಬಗ್ಗೆ ಗೊತ್ತಿಲ್ಲ. 9 ಮನೆಗಳಲ್ಲಿ ಯಾವ ದಾಖಲೆಗಳನ್ನು ಪಡೆದುಕೊಂಡಿದ್ದಾರೆ ಎಂಬ ಬಗ್ಗೆ ಗೊತ್ತಿಲ್ಲ. 9 ಮನೆಗಳಲ್ಲಿ ಮಹಜರು ಮಾಡಿ ಸಹಿ ಪ್ರತ್ಯೇಕವಾಗಿ ಸಹಿ ಪಡೆದುಕೊಂಡ ಬಗ್ಗೆ ನೆನಪಿಲ್ಲ. ಯಾರು ದಾಖಲೆಗಳನ್ನು ತಯಾರು ಮಾಡಿದ್ದಾರೆ ಎಂದು ಗೊತ್ತಿಲ್ಲ. ನಾನು 9 ಮನೆಗಳಿಗೆ ಹೋಗಿಲ್ಲ ಮತ್ತು ನನ್ನ ಸಮಕ್ಷಮ

ನಿಪಿ-9 ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಬಟ್ಟೆ ವ್ಯಾಪಾರಿಯಾದ್ದರಿಂದ ಪೊಲೀಸರೊಂದಿಗೆ ಸೇರಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ